ಅ) ಖಾಸಗೀಯವರನ್ನು ಪ್ರೋತ್ಸಾಹಿಸಲು 1997ರಲ್ಲಿ ಜಾರಿಗೊಳಿಸಲಾದ ಕಾರ್ಯ ನೀತಿಯ ವಿವರಗಳೇನು;

ಇ) ಕೇಂದ್ರ ಸರ್ಕಾರದಿಂದ ಕಳೆದ 3 ವರ್ಷಗಳಲ್ಲಿ ರಾಜ್ಯಕ್ಕೆ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಬಂದ ಹಣ ಎಷ್ಟು;

ಶ್ರೀ ಡಿ.ಟಿ ಜಯಕುಮಾರ್(ಪ್ರವಾಸೋದ್ಯಮ ಸಚಿವರು) :

ಅ) ಪ್ರವಾಸೋದ್ಯಮ ಯೋಜನೆಗೆ ಖಾಸಗಿ ಉದ್ಯಮಿಗಳು ಹ. ಹೊಡಲು ನಿಯಮಗಳನ್ನು ರೂಪಿಸಿರುವುದಿಲ್ಲ. ಆದರೆ ಪ್ರವಾಸೊದ್ಯಮ ಯೋಜನೆಗಳು ಇಲಾಖೆಯಿಂದ ಅನುಮೋದನೆ ಪಡೆಯಲು ಪ್ರವಾಸೋದ್ಯಮ ನೀತಿಯ ರೀತ್ಯ ಯೋಜನೆಗಳನ್ನು ನಿರ್ಮಿಸಬೇಕಾಗಿರುತ್ತದೆ.

ಆ) ಸಹಾಯಧನ, ಮಾರಾಟ ತೆರಿಗೆ ವಿನಾಯಿತಿ, ಭೂ ಪರಿವರ್ತನಾ ಶುಲ್ಕ ವಿನಾಯಿತಿ, ನೋಂದಣಿ ಮತ್ತು ಸ್ಟಾಂಪ್ ಶುಲ್ಕ ವಿನಾಯಿತಿ, ಮಹಿಳಾ ಉದ್ಯಮಿಗಳಿಗೆ, ಅಲ್ಪಸಂಖ್ಯಾತರಿಗೆ, ಅಂಗವಿಕಲರಿಗೆ ಹಾಗೂ ಮಾಜಿ ಸೈನಿಕರಿಗೆ ರೂ. 1.00 ಲಕ್ಷ ಗರಿಷ್ಠ ಮಿತಿಯಲ್ಲಿ ಸೆ. 5 ಹೆಚ್ಚುವರಿ ಸಹಾಯಧನ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಖಾಸಗಿ ಉದ್ಯಮಿಗಳಿಗೆ ರೂ.2.00 ಲಕ್ಷಗಳ ಗರಿಷ್ಠ ಮಿತಿಯಲ್ಲಿ ಶೇಕಡ 10 ಹೆಚ್ಚುವರಿ ಸಹಾಯಧನ ಹಾಗೂ ಪ್ರವಾಸೋದ್ಯಮ ಯೋಜನೆಯನ್ನು ನಿರ್ಮಿಸಲು ಜಮೀನನ್ನು ವಶಪಡಿಸಿ ಕೊಳ್ಳುವಾಗ ರೂ.2.00 ಲಕ್ಷಗಳ ಮಿತಿಯಲ್ಲಿ ಶೇ 20 ಮಾರುಪಾವತಿ, ರಿಯಾಯಿತಿ ದರದಲ್ಲಿ ವಿದ್ಯುತ್ ಮುಂತಾದ ರಿಯಾಯಿತಿಗಳನ್ನು ನೀಡಲೊಪ್ಪಿಗುವುದು.

ಇ) ರೂ. 2032.66 ಲಕ್ಷ.

81(595) ಶ್ರೀ ಕೃಷ್ಣ ಪಾಲೇಮಾರ್ ಜೆ.(ಸುರತ್ಕಲ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಕುಂದಾಪುರದಿಂದ ಬೆಂಗಳೂರು ನಡುವಿನ ಸೇತುವೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗಿದೆಯೇ (ವಿವರಗಳನ್ನು ಒದಗಿಸುವುದು)?

ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಿವರು):

ಅ) ರಾಷ್ಟ್ರೀಯ ಹೆದ್ದಾರಿ--48ರ ಕಿಮೀ 308.87

ಆ) ಹೌದು. ಹಳೆಯ ಸೇತುವೆ ಬದಲಾಗಿ ಹೊಸ ಸೇತುವೆ ನಿರ್ಮಾಣಮನ್ನು ಕೈಗೊಳ್ಳಲಾಗಿದೆ.

82(657) ಶ್ರೀ ಎಂ.ಟಿ.ಕೃಷ್ಣಪ್ಪ (ತುರುವೆಕೆರೆ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ತುರುವೇಕೆರೆ ತಾಲ್ಲೂಕು, ದಂಡಿನಶಿವರ ಹೋಬಳಿ, ಸಂಖಿಗೆ ಎಂ.ಯು.ಎಸ್.ಎಸ್. ಸ್ಥಾವರದ ಅಗತ್ಯತೆ ಇರುವುದು ಸರ್ಕಾರಕ್ಕೆ ಗೊತ್ತಿದೆಯೇ;

ಇ) ಹಾಗಿದ್ದಲ್ಲಿ, ಇದುವರೆಗೂ ಸದರಿ ಸ್ಥಾವರವನ್ನು ಸ್ಥಾಪಿಸದಿರಲು ಕಾರಣವೇನು?

ಉ) ಈ ಸ್ಥಾವರವನ್ನು ಎಂದಿನಿಂದ ಸ್ಥಾಪಿಸಲಾಗುವುದು?

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :